2. ಹಿಂದಿನ ಮತ್ತು ಈಗಿನ ಆಯೋಗವು ನೀಡಿದ ವರದಿ/ಬಾಕಿ ಸಲಹೆಗಳ ಜಾರಿ ಕುರಿತಂತೆ ಇರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದು.

ಸಂಖ್ಯೆ:ಸಕಇ 61 ಬಿಸಿಎ 2009

(ಡಿ.ಸುಧಾಕರ್)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ಸರ್ಕಾರ
ಕರ್ನಾಟಕ ವಿಧಾನ ಸಭೆ

362 ಶ್ರೀ. ಹಾರೀಸ್ ಎನ್.ಎ (ಶಾಂತಿನಗರ)
ಮಾನ್ಯ ಕಾರ್ಮಿಕ ಸಚಿವರು

ಅ) ಬಾಲ ಕಾರ್ಮಿಕರುಗಳ ವಯೋ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು;

ಹೌದು

ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಇದು ಕೇಂದ್ರಸರ್ಕಾರದ ಕಾಯ್ದೆ ಯಾಗಿದ್ದು, ಈ ಬಗ್ಗೆ ಹಾಲಿ ಇರುವ 14 ವರ್ಷ ವಯೋಮಿತಿಯನ್ನು ಹೆಚ್ಚಿಸಬೇಕಾದರೆ ಕೇಂದ್ರ ಸರ್ಕಾರ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ.

ಆ) ಬಾಲ ಕಾರ್ಮಿಕ ಪದ್ಧತಿ ನಿಷೇಧ ಹಾಗೂ ಜೀತ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರದ ಯೋಜನೆಗಳು ಯಾವುವು;

1) ಬಾಲ ಕಾರ್ಮಿಕರಿಗೆ ಸೇತುಬಂಧ ಶಿಕ್ಷಣ ನೀಡುವ ಬಗ್ಗೆ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಜಾರಿಯಲ್ಲಿದ್ದು, ಈ ಸಂಬಂಧ 58 ಬಾಲ ಕಾರ್ಮಿಕ ವಿಶೇಷ ವಸತಿ ಶಾಲೆಗಳು ಮಂಜೂರಾಗಿರುತ್ತದೆ. ಹಾಗೂ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 305 ಬಾಲ ಕಾರ್ಮಿಕ ವಸತಿ ಶಾಲೆಗಳು ನಡೆಯುತ್ತಿರುತ್ತದೆ. ಒಂದು ವರ್ಷದಿಂದ 2 ವರ್ಷದವರೆಗೆ ಸೇತುಬಂಧ ಶಿಕ್ಷಣ ನೀಡಿ, ನಂತರ ಈ ಮಕ್ಕಳನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸಲಾಗುತ್ತದೆ.

2) ಬಾಲ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರ ವಿವಿಧ ಇಲಾಖೆಗಳ 2050 ಅಧಿಕಾರಿಗಳನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ. ಆಗಿಂದಾಗ್ಗೆ ಬಾಲ ಕಾರ್ಮಿಕರ ತಪಾಸಣೆಗಾಗಿ ತಂಡಗಳನ್ನು ರಚಿಸಿಕೊಂಡು ಬಾಲ ಕಾರ್ಮಿಕರನ್ನು ಪತ್ತೆಮಾಡಿ, ಅವರನ್ನು ಬಿಡುಗಡೆಗೊಳಿಸಿ, ಪುನರ್ವಸತಿ ಕಲ್ಪಿಸುವ ಕಾರ್ಯ ನಡೆಯುತ್ತಿದೆ. ತಪ್ಪಿತಸ್ಥ ಮಾಲೀಕರ ವಿರುದ್ಧ ಬಾಲ ಕಾರ್ಮಿಕ (ನಿಷೇಧ

ಮತ್ತು ನಿಯಂತ್ರಣ) ಕಾಯ್ದೆ, 1986 ಅಥವಾ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961 ರನ್ವಯ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.

3) ಗುರುತಿಸಿದ ಎಲ್ಲಾ ಮಕ್ಕಳನ್ನು ವಿಶೇಷ ಪುನರ್ವಸತಿ ಕೇಂದ್ರಗಳಲ್ಲಿ ಅಥವಾ ಮುಖ್ಯವಾಹಿನಿ ಶಾಲೆಗಳಲ್ಲಿ ದಾಖಲು ಮಾಡಲಾಗುತ್ತಿದೆ.

4) ಬಾಲ ಕಾರ್ಮಿಕ ಪದ್ಧತಿಯ ವಿರುದ್ಧ ಅನೇಕ ಪ್ರಚಾರ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದ್ದು, ಬಿತ್ತಿ ಪತ್ರಗಳು, ಕರಪತ್ರಗಳು, ಪೋಸ್ಟರ್‌ಗಳು, ಸ್ಟಿಕ್ಕರ್‌ಗಳು ಮುಂತಾದವುಗಳನ್ನು ಹಂಚಲಾಗುತ್ತಿದೆ. ಜೊತೆಗೆ ತರಬೇತಿ ಕಾರ್ಯಕ್ರಮಗಳು, ಕಾರ್ಯಗಾರಗಳು, ವಿಚಾರ ಸಂಕೀರ್ಣಗಳು, ಸಮ್ಮೇಳನಗಳು, ಜಾಥಾಗಳು, ಬೀದಿ ನಾಟಕಗಳು, ಸಾಕ್ಷ್ಯ ಚಿತ್ರ ನಿರ್ಮಾಣ ಮತ್ತು ಚಲನಚಿತ್ರ ಮಂದಿರಗಳಲ್ಲಿ ಸ್ಲೈಡ್‌ಗಳ ಪ್ರದರ್ಶನವನ್ನು ಸಹ ಮಾಡಲಾಗಿರುತ್ತದೆ.

ಜೀತ ಪದ್ಧತಿ ನಿರ್ಮೂಲನೆ ಸಂಬಂಧ ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳು ಇಂತಿವೆ.

1) ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಕಾರ್ಯಯೋಜನೆ (ಪರಿಷ್ಕೃತ ಮೇ 2000)– ಇದರಡಿ

(1) ಜೀತದಾಳುಗಳ ಸಮೀಕ್ಷಾ ಕಾರ್ಯ

(2) ಜಾಗೃತಿ ಮೂಡಿಸುವ ಚಟುವಟಿಕೆಗಳು

(3) ಮೌಲ್ಯಮಾಪನ ಅಧ್ಯಯನ

(4) ಪ್ರತಿ ಜೀತವಿಮುಕ್ತನಿಗೆ 20,000/–ರೂ.ಗಳ ಪುನರ್ವಸತಿ ಅನುದಾನ.

2) ರಾಜ್ಯ ಪುರಸ್ಕೃತ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆ ಇದರಡಿ ದಿನಾಂಕ: 21.01.2006ರ ತರುವಾಯ ಜೀತ ಪದ್ಧತಿಯಿಂದ ಬಿಡುಗಡೆಗೊಂಡ ದಿನದಿಂದ ಮೊದಲ 2 ವರ್ಷಗಳ ಅಂದರೆ 24 ತಿಂಗಳುಗಳ ಅವಧಿಗೆ ಮಾತ್ರ ಮಾಹೆಯನ ರೂ.300/– ರಂತೆ ಸಹಾಯಧನ.

ಇ) ಬಾಲ ಕಾರ್ಮಿಕರಿಗೆ ಶಿಕ್ಷಣ ಮತ್ತು ಉದ್ಯೋಗ ನೀಡುವ ಕುರಿತು ಸರ್ಕಾರ ಕ್ರಿಯಾ ಯೋಜನೆಗಳನ್ನು ರೂಪಿಸಿದೆಯೇ (ವಿವರ ನೀಡುವುದು)?

ಹೌದು

ಮೇಲೆ ತಿಳಿಸಿದಂತೆ ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 58 ವಿಶೇಷ ವಸತಿ ಶಾಲೆಗಳು ಹಾಗೂ ರಾಷ್ಟ್ರೀಯ ಬಾಲ ಕಾರ್ಮಿಕ ಕ್ರಿಯಾ ಯೋಜನೆಯಡಿಯಲ್ಲಿ 305 ದಿನದ ಶಾಲೆಗಳು ನಡೆಯುತ್ತಿರುತ್ತದೆ. ಬಾಲ ಕಾರ್ಮಿಕರಿಗೆ ವೃತ್ತಿ ಶಿಕ್ಷಣ ನೀಡಿ, ಸುಲಭವಾಗಿ ಉದ್ಯೋಗ ಸಿಗುವಂತೆ ಮಾಡಲು ಅಥವಾ ಸ್ವಂತ ಉದ್ಯೋಗ ಮಾಡಲು "ಬಾಯ್ಸ್‌ಟೌನ್" ಹೈದ್ರಾಬಾದ್ ಮಾದರಿಯಲ್ಲಿ ಪುನರ್ವಸತಿ ಕೇಂದ್ರವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕಾಇ 19 ಸಿಎಲ್‌ಸಿ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು.

ಕರ್ನಾಟಕ ವಿಧಾನ ಸಭೆ

363 ಶ್ರೀ ಯು.ಟಿ.ಖಾದರ್.

ಶ್ರೀ.ಡಿ.ಸುಧಾಕರ್, ಸಮಾಜ ಕಲ್ಯಾಣ ಸಚಿವರು.

ಅ) ಮಂಗಳೂರು ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನಕ್ಷರಸ್ತ ಪುರುಷ ಮತ್ತು ಮಹಿಳೆಯರಿಗೆ ವಿವಿಧ ಭೋಧಕ ವಿಷಯಗಳು ವೃತ್ತಿ ತರಬೇತಿಯನ್ನು ನೀಡಲು ಸರ್ಕಾರವು ಯೋಜನೆಯನ್ನು ರೂಪಿಸಿದೆಯೇ;

ಸಮಾಜ ಕಲ್ಯಾಣ ಇಲಾಖೆ.

ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನಕ್ಷರಸ್ಥ ಪರಿಶಿಷ್ಟ ಜಾತಿಯ ನಿರುದ್ಯೋಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ತರಬೇತಿಯನ್ನು 2007–08ನೇ ಸಾಲಿನ ತನಕ ಹಮ್ಮಿಕೊಂಡಿರುವುದಿಲ್ಲ.

ಆದರೆ, ಅಪ್ಯಾರೆಲ್ ಟೆಕ್ಸ್‌ಟೈಲ್ ಡಿಸೈನ್, ಬೆಂಗಳೂರು ರವರ ಮೂಲಕ ಸ್ಯುಯಿಂಗ್ ಮೆಷಿನ್ ಅಪರೇಟರ್ ಹಾಗೂ ಕೌಶಲ್ಯ ಶಾಲೆಯ ಮೂಲಕ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಪ್ಲಂಬಿಂಗ್, ಎಲೆಕ್ಟ್ರೀಷಿಯನ್, ಗಾರೆ ಮುಂತಾದ ವಿಷಯಗಳಲ್ಲಿ ಅನಕ್ಷರಸ್ಥ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ತರಬೇತಿ ನೀಡಲು 2008–09ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗದ ಅನಕ್ಷರಸ್ಥ ಪುರುಷ ಮತ್ತು ಮಹಿಳೆಯರಿಗೆ ವಿವಿಧ ಬೋಧಕ ವಿಷಯಗಳಲ್ಲಿ ವೃತ್ತಿ ತರಬೇತಿಯನ್ನು ನೀಡುವ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ.

ಆ) ಹಾಗಿದ್ದಲ್ಲಿ, ತರಬೇತಿ ಪಡೆದವರಿಗೆ ಉದ್ಯೋಗವನ್ನು ಒದಗಿಸಿಕೊಡಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ತರಬೇತಿಯನ್ನು ಪಡೆದ ಅಭ್ಯರ್ಥಿಗಳಿಗೆ ಉದ್ಯೋಗ ಕೊಡಿಸುವ ಷರತ್ತಿಗೊಳಪಟ್ಟು ತರಬೇತಿಗೆ ಆದೇಶ ನೀಡಲಾಗುತ್ತಿದ್ದು, ತರಬೇತಿ ಸಂಸ್ಥೆಯು ಉದ್ಯೋಗ ಕೊಟ್ಟ ಬಗ್ಗೆ ಖಾತರಿ ಪಡಿಸಿಕೊಂಡು ಅಂತಿಮ ಕಂತಿನ ಹಣವನ್ನು ಪಾವತಿಸಲಾಗುತ್ತಿದೆ.

ಸಂಖ್ಯೆ: ಸಕಇ 33 ಸ್ವೀಮರ 2009

(ಡಿ.ಸುಧಾಕರ)